



ಭೀಮೇಶ್ವರ ದೇವಾಲಯದ ಮುಖ್ಯ ಗರ್ಭಗುಡಿಯ ದ್ವಾರ ಪಂಚ ಪಟ್ಟಿಕೆಗಳನ್ನು ಹೊಂದಿದ್ದು, ಪ್ರತಿಯೊಂದು ಪಟ್ಟಿಕೆಯಲ್ಲೂ ಸೂಕ್ಷ್ಮ ಕೆತ್ತನೆಗಳಿವೆ. ದ್ವಾರದ ಕೆಳಭಾಗದಲ್ಲಿ ಎರಡೂ ಕಡೆ ದ್ವಾರಪಾಲಕರು ಮತ್ತು ಚಾಮರಧಾರಿಣಿಯರನ್ನು ಕೆತ್ತಲಾಗಿದೆ. ಅಂತರಾಳದ ದ್ವಾರದ ಮೇಲೆ ಶಿವ ಪಾರ್ವತಿಯರು ಕುಳಿತ ಭಂಗಿಯಲ್ಲಿದ್ದು, ಚಾಮರದಿಂದ ಗಾಳಿ ಬೀಸುತ್ತಿರುವ ಸ್ತ್ರೀಯರ ಸುಂದರ ಕೆತ್ತನೆಗಳಿವೆ. ದ್ವಾರದ ಇಕ್ಕೆಲಗಳಲ್ಲಿರುವ ಜಾಲಂಧ್ರಗಳಲ್ಲಿ ಸುರುಳಿ ಆಕಾರದಲ್ಲಿರುವ ರಚನೆಯಲ್ಲಿ ನೃತ್ಯಗಾತಿಯರನ್ನು ಕೆತ್ತಲಾಗಿದೆ. ಕೆಳಭಾಗದ ಇಕ್ಕೆಲಗಳಲ್ಲಿರುವ ಡಮರುಗಧಾರಿ ಶಿವನ ಶಿಲ್ಪವು ಮನೋಹರವಾಗಿದ್ದು ಸೂಕ್ಷ್ಮ ಕೆತ್ತನೆಗಳಿಂದ ಕೂಡಿದೆ. ಇಲ್ಲಿರುವ ಕಂಬಗಳು ಹಲವು ಕೋನಗಳನ್ನು ಹೊಂದಿದ್ದು ಶಿಲ್ಪಿಯ ಕಲಾಪ್ರೌಢಿಮೆಗೆ ಸಾಕ್ಷಿಯಾಗಿವೆ. ಕಂಬಗಳ ಮೇಲೆ ಕೆತ್ತಲಾಗಿರುವ ಹಲವು ದಳಗಳ ಪುಷ್ಪಗಳು ಆಕರ್ಷಣೀಯವಾಗಿವೆ.



ಶಿಖರವು ಸಂಕೀರ್ಣ ಜೋಡಣೆಯಾಗಿದ್ದು ಅತ್ಯಾಕರ್ಷಕ ಶ್ರೇಣೀಕೃತ ಕೀರ್ತಿಮುಖ ಉಬ್ಬು ಶಿಲ್ಪಗಳನ್ನು ಹೊಂದಿದೆ. ಪ್ರತಿ ಕೀರ್ತಿಮುಖದ ಕೆಳಗೆ ಶಿವನ ಎರಡು ರೂಪಗಳಾದ ಮಹೇಶ್ವರ ಮತ್ತು ನಟರಾಜರನ್ನು ಹೋಲುವ ಉಬ್ಬು ಶಿಲ್ಪವಿದೆ.

ದೇವಾಲಯದ ಹೊರಭಿತ್ತಿಗಳಲ್ಲಿ ಚಿಕಣಿ ಶಿಖರ ಮತ್ತು ಅಂಕಣಗಳಿವೆ. ರಚನೆಯ ಕೆಳಭಾಗದಲ್ಲಿ ಆಯತಾಕಾರದ ಅನೇಕ ಪುಟ್ಟ ಶಿಲ್ಪಗಳಿವೆ. ಅವುಗಳಲ್ಲಿ ಬಹುಪಾಲು, ಕಣ್ಣುಗಳನ್ನು ಹೊರಚಾಚಿರುವ ಉಗ್ರರೂಪದ ಕೀರ್ತಿಮುಖಗಳಾಗಿದ್ದು ಆಭರಣಗಳಿಂದ ಅಲಂಕರಿಸಲ್ಪಟ್ಟಿವೆ. ನರಸಿಂಹ ವಿಗ್ರಹದಲ್ಲಿ ಮನುಷ್ಯನ ದೇಹ ಮತ್ತು ಸಿಂಹದ ಮುಖವಿರುತ್ತದೆ. ಆದರೆ ಇದಕ್ಕೆ ವಿರುದ್ಧವಾಗಿ ಮನುಷ್ಯನ ಮುಖ ಹಾಗೂ ಸಿಂಹದ ದೇಹವನ್ನು ಹೊಂದಿರುವ ಶಿಲ್ಪಗಳು ಕೀರ್ತಿಮುಖದ ಇಕ್ಕೆಲಗಳಲ್ಲಿವೆ. ಇದೇ ರೀತಿ ಕೆಲವು ಕೀರ್ತಿಮುಖಗಳ ಇಕ್ಕೆಲಗಳಲ್ಲಿ ಆನೆಯ ಮುಖ ಮತ್ತು ಸಿಂಹದ ದೇಹವಿರುವ ಶಿಲ್ಪಗಳು ನೋಡುಗರನ್ನು ಅಚ್ಚರಿಗೊಳಿಸುತ್ತವೆ.

ದೇವಾಲಯದ ಸುತ್ತಲೂ ರಾಮಾಯಣ, ಮಹಾಭಾರತದ ನಂಟುಹೊಂದಿರುವ ಘಟನೆಗಳ ಶಿಲ್ಪಗಳು, ಜಾನಪದ ಶಿಲ್ಪಗಳು, ದೇವಾನುದೇವತೆಗಳ ಶಿಲ್ಪಗಳು ಹಾಗೂ ಹೊಯ್ಸಳ ಲಾಂಛನ ಶಿಲ್ಪಗಳಿವೆ. ಹಿರಣ್ಯಕಶಿಪುವನ್ನು ವಧಿಸುತ್ತಿರುವ ನರಸಿಂಹನ ಅಪೂರ್ಣ ಶಿಲ್ಪವನ್ನು ಗೂಡಿನಲ್ಲಿಡಲಾಗಿದೆ. ಹೊರಭಿತ್ತಿಗಳಲ್ಲಿನ ಬಹುತೇಕ ಶಿಲ್ಪಗಳು ಭಾಗಶಃ ಭಗ್ನಗೊಂಡಿದ್ದು, ಕೆಲವೊಂದು ಶಿಲ್ಪಗಳು ಗುರುತಿಸಲಾಗದಷ್ಟು ಹಾಳಾಗಿವೆ. ದೇವಾಲಯದ ಪ್ರಾಂಗಣದಲ್ಲಿ ನಾಗರ ಕಲ್ಲುಗಳು, ವೀರಗಲ್ಲು ಮತ್ತು ಕಲ್ಲಿನ ಮೇಲೆ ಕೆತ್ತಲಾದ ಶಾಸನಗಳು, ಭಗ್ನಗೊಂಡ ಹೊಯ್ಸಳ ಲಾಂಛನಗಳನ್ನು ಸಾಲಾಗಿ ಜೋಡಿಸಿಡಲಾಗಿದೆ.

ಈ ದೇವಾಲಯವನ್ನು ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆ ರಾಷ್ಟ್ರೀಯ ಪ್ರಾಮುಖ್ಯದ ಸ್ಮಾರಕವಾಗಿ ಗುರ್ತಿಸಿದೆ. ದೇವಾಲಯದ ಪ್ರಾಂಗಣದಲ್ಲಿ ಸುಂದರ ಹುಲ್ಲುಹಾಸನ್ನು ನಿರ್ಮಿಸಲಾಗಿದೆ. ಜನಜಂಗುಳಿಯಿಂದ ದೂರವಿರುವ ಈ ದೇವಾಲಯದ ಶಿಲ್ಪಕಲೆ ಮತ್ತು ಪ್ರಕೃತಿ ಸೌಂದರ್ಯವನ್ನು ಸವಿಯಲು ಹಾಗೂ ಇತಿಹಾಸವನ್ನು ತಿಳಿದುಕೊಳ್ಳಲು ಹಲವು ಶಾಲೆಗಳ ವಿದ್ಯಾರ್ಥಿಗಳು ಒಂದು ದಿನದ ಪ್ರವಾಸ ಹಮ್ಮಿಕೊಳ್ಳುತ್ತಾರೆ.

ಬೆಂಗಳೂರಿನಿಂದ 310 ಕಿ.ಮೀ., ದಾವಣಗೆರೆಯಿಂದ 40 ಕಿ.ಮೀ. ದೂರಲ್ಲಿರುವ 'ನೀಲಗುಂದ' ಗ್ರಾಮಕ್ಕೆ ವಿರಳವಾಗಿ ರಾಜ್ಯ ಸಾರಿಗೆ ಸಂಸ್ಥೆ ಬಸ್‌ಗಳಿವೆ. ನೀಲಗುಂದ ಗ್ರಾಮದಿಂದ ಸುಮಾರು 2 ಕಿ.ಮೀ. ದೂರದಲ್ಲಿ ಈ ದೇವಾಲಯವಿದೆ. ಇಲ್ಲಿಗೆ ಯಾವುದೇ ವಾಹನ ಸೌಕರ್ಯವಿರುವುದಿಲ್ಲ. ಹಾಗಾಗಿ ಖಾಸಗಿ ವಾಹನಗಳಲ್ಲಿ ತೆರಳುವುದು ಉತ್ತಮ.